ಆಗಸ್ಟ್ - 1

ಜೀವನ ಮರಣಗಳು ನಾಲಿಗೆಯ ವಶ. -ಜ್ಞಾನೋಕ್ತಿ 18:21

ನಾಲಿಗೆಯ ಪ್ರಭಾವ ಬೇರೆ ಎಲ್ಲಾ ಅಂಗಗಳ ಒಟ್ಟು ಸಾಮರ್ಥ್ಯಕ್ಕಿಂತ ಅಧಿಕವಾಗಿರುವದು. ಆದುದರಿಂದ ಕರ್ತನ ಜನರು ನಾಲಿಗೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದು ಬಹಳ ಪ್ರಾಮುಖ್ಯವಾದ ಕಾರ್ಯ. ಹೀಗೆ ತಮ್ಮ ಮರ್ತ್ಯ ದೇಹಗಳನ್ನು ಕ್ರಿಸ್ತನ ಸೇವೆಯಲ್ಲಿ ತೊಡಗಿಸುವದು ಯುಕ್ತವಾಗಿದೆ. ಪ್ರೀತಿ ಮತ್ತು ಕರುಣೆಯಿಂದ ಕೂಡಿದ ಮಾತುಗಳು ಎಷ್ಟು ಉಪಯುಕ್ತವಾಗಿರುವವೆಂದರೆ, ಇಂತಹ ಮಾತುಗಳು ಮಾನವ ಜೀವಿತದ ಪಥವನ್ನೇ ಬದಲಾಯಿಸಿರುವದು. ಒಂದು ರಾಷ್ಟ್ರದ ಭವಿಷ್ಯ ರೂಪಿಸುವದಕ್ಕೆ ಈ ಮಾತುಗಳು ಸಾಧಕವಾಗಿವೆ. ಅದರಂತೆ ಕೆಟ್ಟ ಮಾತುಗಳು ನಿಷ್ಕರುಣೆಯ ಮಾತುಗಳು, ಆರೋಪದ ಮಾತುಗಳು, ಅನ್ಯಾಯವನ್ನು ಮಾಡುವದಲ್ಲದೆ, ಆ ಮನುಷ್ಯನ ಗುಣವನ್ನೇ ನಾಶಮಾಡುತ್ತದೆ. ಅಪೋಸ್ತಲನು ಹೇಳುವಂತೆ ಮೊದಲು ಇದನ್ನು “ತಾನೆ ನರಕದಿಂದ ಬೆಂಕಿ ಹತ್ತಿಸಿಕೊಳ್ಳುತ್ತಾ, ಪ್ರಪಂಚವೆಂಬ ಚಕ್ರಕ್ಕೆ ಬೆಂಕಿ ಹಚ್ಚುತ್ತದೆ.” ಕೋಪ, ಕಲಹ, ವೈರತ್ವಗಳನ್ನು ಸೃಷ್ಟಿಸಿ - ಮೊದಲು ಇದನ್ನು ಯೋಚಿಸಿರಲಿಲ್ಲ. ಇದೇನು ಆಶ್ಚರ್ಯವಲ್ಲ, ಈ ನಾಲಿಗೆಗಳು ತಾನೇ ನರಕದಿಂದ ಬೆಂಕಿ ಹತ್ತಿಸಿಕೊಳ್ಳುತ್ತಾ ಅಂದರೆ, ಎರಡನೆ ಮರಣಕ್ಕೆ ಕೊಂಡೊಯ್ಯುತ್ತದೆ-Z ’99, 75 (ಖ 2442).

* * *

ಆಗಸ್ಟ್ - 2

ಬನ್ನಿರಿ, ನಮ್ಮ ನಿರ್ಮಾಣಿಕನಾದ ಯೆಹೋವನಿಗೆ ಸಾಷ್ಟಾಂಗವೆರಗಿ ಆರಾಧಿಸೋಣ.

-ಕೀರ್ತನೆಗಳು 95:6

ನಮ್ಮ ತೀರ್ಮಾನವೇನೆಂದರೆ, ನಮ್ಮ ಜೀವನದಲ್ಲಿ ಕ್ರಮಬದ್ಧ, ನಿಯಮಬದ್ಧವಾಗಿ ನಡೆಯದೆ ಯಾವುದೇ ಕ್ರೈಸ್ತನು ಪ್ರಾರ್ಥನೆಯನ್ನು ಕ್ರಮವಾಗಿ ಮಾಡದ ಹೊರತು, ಅಪೋಸ್ತಲನು ಹೇಳಿದಂತೆ ಚಿನ್ನ, ಬೆಳ್ಳಿ ರತ್ನಗಳಿಗೆ ಹೋಲಿಸಿರುವ ನಮ್ಮ ನಡತೆ ಮತ್ತು ನಂಬಿಕೆಯನ್ನು ಉಳಿಸಿಕೊಳ್ಳುವದು ಹಾಗೂ ನಮ್ಮ ಗುಣವನ್ನು ರೂಪಿಸಿಕೊಳ್ಳುವದು ನಮ್ಮ ತೀರ್ಮಾನದ ಪ್ರಕಾರ ಅಸಾಧ್ಯವಾಗಿದೆ. ಹೀಗಿರುವಲ್ಲಿ ನಾವು ನಮ್ಮ ಮೊಣಕಾಲೂರಿ ಸದಾ ಪ್ರಾರ್ಥಿಸದೆ ಯಾವುದನ್ನೂ ಸಾಧಿಸುವದಾಗಲಿ ಪಡೆಯುವದಾಗಲಿ ಸಾಧ್ಯವಿಲ್ಲ. ಕರ್ತನ ಜನರು ಜೀವಿಸಿದ ಜೀವನದ ಸಾಕ್ಷಿ ಹಾಗೂ ಅವರ ಅನುಭವಗಳು ಇದನ್ನು ದೃಢೀಕರಿಸುತ್ತದೆ-Z ’99, 184 (ಖ 2501).

* * *

ಆಗಸ್ಟ್ - 3

ದೇಶ ನಿವಾಸಿಗಳನ್ನೂ ಅನ್ಯಜನರಿಂದ ತಂದ ಹೆಂಡತಿಯರನ್ನೂ ಬಿಟ್ಟು ಬೇರೆಯಾಗಿರಿ.
-ಎಜ್ರ 10:11

ಒಬ್ಬರ ಹಿತವಚನದಂತೆ ಲೋಕದಲ್ಲಿರುವ ಕ್ರೈಸ್ತನು ಸಾಗರದಲ್ಲಿರುವ ಹಡಗು ಇದ್ದಂತೆ. ಸಮುದ್ರದ ನೀರು ಹಡಗಿನಲ್ಲಿರದಿದ್ದರೆ, ಹಡಗು ಸುರಕ್ಷಿತವಾಗಿರುವದು. ಕ್ರೈಸ್ತ ಸಮುದಾಯದಲ್ಲಿರುವ ಅನೇಕ ತೊಡಕುಗಳಲ್ಲಿ ಒಂದು ತೊಡಕು ಯಾವದೆಂದರೆ, ಅನ್ಯದೇಶಸ್ತರನ್ನು, ಆಗಂತಕರನ್ನು ಸೇರಿಸಿ ಅವರನ್ನು ಕ್ರೈಸ್ತರೆಂಬದಾಗಿ ಪರಿಗಣಿಸಿರುವದು. ಇದು ಕ್ರೈಸ್ತರನ್ನ ಘಾಸಿಪಡಿಸಿ ಅವರ ದರ್ಜೆಯನ್ನ ಕೆಳಕ್ಕಿಳಿಸುವದಲ್ಲದೆ, (ಸರಾಸರಿ ಪ್ರಮಾಣವನ್ನು ಪರಿಗಣಿಸಿದೆ.) ಅಪರಿಚಿತರನ್ನು ಹಾನಿಗೊಳಿಸುವುದು. ಅಂದರೆ, ಈ ಅಪರಿಚಿತರು ಹೃದಯ ಪರಿವರ್ತನೆಯಾಗದೆ, ನಾವು ಸುರಕ್ಷಿತವಾಗಿದ್ದೇವೆ ಎಂಬುದಾಗಿ ನಂಬಿ, ತಾವು ಜನರ ಮುಂದೆ ಮರ್ಯಾದಸ್ತರಾಗಿ ಕಾಣಿಸಿಕೊಂಡು ಆಗಾಗ ಸಾಮೂಹಿಕ ಪ್ರಾರ್ಥನೆಯಲ್ಲಿ ನಿರತರಾಗುವರು-Z ’99, 203 (ಖ 2510).

* * *

ಆಗಸ್ಟ್ - 4

ಕರ್ತನ ದಾಸನು ಜಗಳವಾಡದೆ ಎಲ್ಲರ ವಿಷಯದಲ್ಲಿ ಸಾಧುವೂ, ಬೋಧಿಸುವದರಲ್ಲಿ ಪ್ರವೀಣನೂ, ಕೇಡನ್ನು ಸಹಿಸಿಕೊಳ್ಳುವವನು, ಎದುರಿಸುವವರನ್ನು ನಿಧಾನದಿಂದ ತಿದ್ದುವವನೂ ಆಗಿರಬೇಕು. -2ತಿಮೋಥಿ 2:24,25

ದೇವ ಜನರಲ್ಲಿ ಕೆಲವರು ಸತ್ಯದ ಮೇಲಿರುವ ತಮ್ಮ ಪ್ರಭಾವವನ್ನ ದೈವ ಯೋಜನೆಯ ವಿಷಯವಾಗಿ ಇತರರೊಂದಿಗೆ ಮಾತಾಡುವಾಗ ಎಲ್ಲೆ ಮೀರಿ ಆತ್ಮವಿಶ್ವಾಸ ಹಾಗೂ ಆತ್ಮ ಭರವಸೆಯನ್ನಿಟ್ಟುಕೊಂಡು ಪ್ರಕಟಿಸುವದರ ಮೂಲಕ ಸತ್ಯದ ಪ್ರಭಾವವದ ಮೇಲೆ ದುಷ್ಪರಿಣಾಮವಾಗುವಂತೆ ಮಾಡಿದ್ದಾರೆ. ಅದರಲ್ಲೂ ಹೆಚ್ಚಾಗಿ ಬುದ್ಧಿ ಜೀವಿಗಳೊಡನೆ ಮಾತಾಡುವಾಗ ಈ ಪರಿಣಾಮವುಂಟಾಗಿದೆ. ಆದುದರಿಂದ, ಧೀನ ಸ್ವಭಾವವು ಅದು ಎಲ್ಲೇ ಇದ್ದರು ಅದು ಒಂದು ಅಪರೂಪದ ರತ್ನ. ಈ ಗುಣ ವಿಶೇಷವಾಗಿ ಸತ್ಯಪ್ರಚಾರ ಮಾಡುವಾಗ ಒಂದು ಉಪಯುಕ್ತ ಸಾಧನ ಮತ್ತು ಸತ್ಯದ ಪ್ರಭಾವ ಹೊಳೆಯುತ್ತದೆ. ಹೀಗಿರುವಲ್ಲಿ ಸತ್ಯವನ್ನು ಎಲ್ಲಾ ರೀತಿಯ ಶಕ್ತಿಯಿಂದ ಬಲವಾಗಿ ಪ್ರಯೋಗಿಸೋಣ. ಆದರೆ, ಈ ಪ್ರಯೋಗ ಧೀನತೆಯಿಂದಲೂ, ತಗ್ಗಿದ ಸ್ವಭಾವದಿಂದಲೂ ಪ್ರಯೋಗವಾಗಲಿ. ಅದರಲ್ಲೂ ಸತ್ಯವನ್ನು ಪ್ರಚಾರ ಮಾಡುವಾಗ ಪ್ರಶ್ನೆಯ ರೀತಿಯಲ್ಲಿ ಪ್ರಚಾರ ಮಾಡುವದು ಅನೇಕ ವೇಳೆ ಅದು ಬಲಯುತವಾಗಿಯೂ ಮತ್ತು ಪ್ರಯೋಜನಕರವಾಗಿಯೂ ಕಂಡುಬಂದಿದೆ-Z ’00, 14 (ಖ 2558).

* * *

ಆಗಸ್ಟ - 5

ಇದಲ್ಲದೆ, ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರಿತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ.

-ರೋಮಾಪುರ 8:28

ಇದನ್ನು ಮನಸ್ಸಿನಲ್ಲಿಟ್ಟುಕೊಂಡು ದೇವ ಜನರೆಲ್ಲರೂ ದೈವಾನುಗ್ರಹದಂತೆ ತಮಗಿರುವುಗಳಲ್ಲಿ ತೃಪ್ತರಾಗಿದ್ದು, ಆಲಸ್ಯರಾಗಿರದೆ, ತಮ್ಮ ಶಕ್ತ್ಯಾನುಸಾರ ತಾವು ಮಾಡಬೇಕಾಗಿರುವದನೆಲ್ಲಾ ಮಾಡಿ, ತೃಪ್ತರಾಗಿರಬೇಕು. ಅವರು - ಆತಂಕಗೊಳ್ಳದೆ, ಸಿಡುಕಾಗಿರದೆ, ಅತೃಪ್ತಿಯುಳ್ಳವರಾಗಿ ದೇವರ ಪರಾಮರಿಕೆಯನ್ನು ಕುರಿತು ಪ್ರಶ್ನಿಸುವವರಾಗಿರಬಾರದು. ಕರ್ತನು ನಮ್ಮನ್ನು ವ್ಯಕ್ತಿಗತವಾಗಿ ಯಾವುದೋ ಒಂದು ವಿಶೇಷ ಸೇವೆಯಲ್ಲಿ ನಮ್ಮನ್ನು ತೊಡಗಿಸಲು ಈ ಅನುಭವಗಳನ್ನು ನಮ್ಮ ಜೀವನದಲ್ಲಿ ನಡೆಯುವದಕ್ಕೆ ಅವಕಾಶಕೊಟ್ಟು ನಮ್ಮನ್ನು ಒಂದು ವಿಶೇಷ ಸೇವೆಗಾಗಿ ತಯಾರು ಮಾಡುತ್ತಿರಬಹುದು. ನಾವು ತಿಳಿಯತಕ್ಕದ್ದೇನಂದರೆ, ನಮ್ಮಲ್ಲಿ ಯಾವ ಅಪರಿಪೂರ್ಣತೆಯನ್ನು ಕುರಿತು ತೀರ್ಮಾನಿಸಲು ಸಮರ್ಥರಲ್ಲ. ಹೀಗಿರುವಲ್ಲಿ ನಮಗೆ ಬಂದೊದಗುವ ಅನುಭವಗಳನ್ನು, ಘಟನೆಗಳನ್ನು ತೀರ್ಮಾನಿಸಲು ಸಾಧ್ಯವಿಲ್ಲ. ಇವೆಲ್ಲವು ನಮಗೆ ಸಹಾಯಕವಾಗಿ ಪರಿಣಮಿಸುವದು-Z ’00, 22 (ಖ 2562).

* * *

ಆಗಸ್ಟ - 6

ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು.

-ಯಾಕೋಬ 4:7

ಶೋಧನೆಯನ್ನು ಖಚಿತವಾಗಿ ನಿರಾಕರಿಸಿದರೆ, ಅದು ನಮ್ಮ ಗುಣವನ್ನು ಬಲಗೊಳಿಸುತ್ತದೆ. ಆ ಸಮಯಕ್ಕಲ್ಲದೆ, ಮುಂದೆ ಸಂಭವಿಸುವ ಶೋಧನೆಗಳನ್ನು ನಿರಾಕರಿಸಲು ಸಾಧ್ಯವಾಗುತ್ತದೆ. ಇಂತಹ ಖಚಿತ ನಿಲುವು ಶೋಧನೆಗೆ ವಿರುದ್ಧವಾದ ಈ ಗುಣವಿರುವವನ ಸಂಗಡ ಚರ್ಚಿಸುವದು ಅಪ್ರಯೋಜನ. ಆದರೆ, ವಿಷಯದಲ್ಲಿ ರಾಜಿಯಾದರೆ, ಅಪಾದಕ ದೂತನು ಚರ್ಚೆಯನ್ನು ಮುಂದುವರಿಸಿ ಅನೇಕ ಕಾರಣಗಳನ್ನು ಮುಂದಿಟ್ಟು ಅವನು ಮಾಡುವ ವಾಗ್ವಾದಕ್ಕೆ ಉತ್ತರ ಕೊಡಲಾಗದ ಅಪಾಯದ ಪರಿಸ್ಥಿತಿಗೆ ಒಳಗಾಗುವೆವು. ಅಪೋಸ್ತಲನು ಹೇಳುವಂತೆ ಸೈತಾನನು ಕುಯುಕ್ತಿಯುಳ್ಳವನು. ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ. ಹೀಗಿರುವಲ್ಲಿ ನಾವು ಕರ್ತನಿಗೂ, ಆತ್ಮಕ್ಕೂ ಮತ್ತು ವಾಕ್ಯಕ್ಕೆ ವಿಳಂಬವಿಲ್ಲದೆ, ವಿಧೇಯರಾಗಿರುವದೊಂದೇ ಯಾವ ಸಹೋದರನಿಗಾದರೂ ಇರುವ ಸುರಕ್ಷಿತ ಮಾರ್ಗ-Z ’00, 30 (ಖ 2565).

* * *

ಆಗಸ್ಟ್ - 7

ಯಾವನಾದರೂ ರಂಗಸ್ಥಳದಲ್ಲಿ ಎದುರಾಳಿಯೊಡನೆ ಹೋರಾಡುವಾಗ ನಿಯಮದ ಪ್ರಕಾರ ಹೋರಾಡದಿದ್ದರೆ, ಅವನಿಗೆ ಜಯಮಾಲೆ ದೊರಕುವದಿಲ್ಲ. -2 ತಿಮೋಥಿ 2:5

ಕ್ರಿಸ್ತನು ದೇವರ ಸಮಯವನ್ನು, ಕಾಲಗಳನ್ನು ಮತ್ತು ಆತನ ವಿಧಾನ ಕ್ರಮಗಳನ್ನು ಗಮನಿಸಿದನು. ತನ್ನ ಜೀವಿತವನ್ನು ಆಜಾಗರೂಕತೆಯಿಂದ ಅಪಾಯಕ್ಕೆ ಸಿಕ್ಕಿಸಲಿಲ್ಲ. ಪ್ರವಾದಿಗಳು ಮುಂತಿಳಿಸಿದ ದಿನ ಗಳಿಗೆಯನ್ನು ಗಣನೆಗೆ ತೆಗೆದುಕೊಂಡು, ಆ ಗಳಿಗೆ, ದಿನ ಬಂದಾಗ ತನ್ನನ್ನು ವೈರಿಗಳ ಕೈಗೆ ಒಪ್ಪಿಸಿದನು. ಆತನು ಬೀದಿಗಳಲ್ಲಿ, ಚೌಕಗಳಲ್ಲಿ ಉದ್ದವಾದ ಪ್ರಾರ್ಥನೆಯನ್ನು ಎಲ್ಲರು ಕೇಳುವಂತೆ ಗಲಾಟೆ ಮತ್ತು ಆವೇಶದಿಂದ ಕೂಡಿ, ಪ್ರವಾದಿಗಳು ಮುಂತಿಳಿಸಿದಂತೆ ಮಾಡಲಿಲ್ಲ. ಯೆಶಾಯ 42:2ರಲ್ಲಿ ಹೇಳಿರುವಂತೆ ಕೂಗಾಡಲಿಲ್ಲ, ಆರ್ಭಟಿಸಲಿಲ್ಲ. ಈತನ ಧ್ವನಿ ಬೀದಿಗಳಲ್ಲಿ ಕೇಳಿಸಲಿಲ್ಲ. ಈತನು ದೇವರ ಕ್ರಮವನ್ನು ಅನುಸಿರಿಸಿದನು ಅಂದರೆ, ಬುದ್ಧಿಯಿಂದಲ್ಲ, ವಿವೇಚನೆಯಿಂದಲೂ ವಾಕ್ಯವನ್ನು ಸಾರಿ ಅದರಿಂದ ದೇವರ ರಾಜ್ಯಕ್ಕೆ ನೇಮಕವಾದವರನ್ನು ಆಕರ್ಷಿಸಿ ಮನುಷ್ಯರಿಂದ ದೇವರ ರಾಜ್ಯದ ಬಾಧ್ಯತೆಯನ್ನು ಹೊಂದುವವರನ್ನು ಆರಿಸಿಕೊಂಡನು. ಯಾರಾರು ಈ ಓಟದಲ್ಲಿ ಭಾಗವಹಿಸುವರೋ ಅವರು ಕರ್ತನು ಹೆಜ್ಜೆಯಿಟ್ಟಂತೆ ಹೆಜ್ಜೆಯಿಟ್ಟು ಆತನ ಆತ್ಮದಿಂದ ತುಂಬಿದವರಾಗಿ ಓಡಿ ಜಯಮಾಲೆಯನ್ನು ಪಡೆಯುವರು-Z ’02, 265 (ಖ 3069).

* * *

ಆಗಸ್ಟ್ - 8

ಇದಲ್ಲದೆ, ನೀವು ಯಾರ ಮನೆಯೊಳಗೆ ಹೋದರೂ-ಈ ಮನೆಗೆ ಶುಭವಾಗಲಿ ಎಂದು ಮೊದಲು ಹೇಳಿರಿ. ಆಶೀರ್ವಾದ ಪಾತ್ರನು ಅಲ್ಲಿ ಇದ್ದರೆ, ಆಶೀರ್ವಾದವು ಅವನ ಮೇಲೆ ನಿಲ್ಲುವುದು; ಇಲ್ಲದಿದ್ದರೆ ಅದು ನಿಮಗೆ ಹಿಂತಿರುಗುವದು. -ಲೂಕ 10:5,6

ಈ ವಾಕ್ಯದಲ್ಲಿ ಕರ್ತನು ಕೊಟ್ಟಿರುವ ಆಜ್ಞೆಯನ್ನು ಈಗ ನಡೆಯುತ್ತಿರುವ ಸುಗ್ಗಿಯಲ್ಲಿ ಭಾಗವಹಿಸಿರುವ ಪ್ರತಿಯೊಬ್ಬ ಸೇವಕನು ಗಮನಿಸಬೇಕು. ಕರ್ತನ ಪ್ರತಿನಿಧಿಗಳು ಎಲ್ಲೇ ಹೋದರೂ, ಕಲಹ, ಗಲಿಬಿಲಿ, ಗಲಭೆ, ಜಗಳವನ್ನು ಜೊತೆಯಲ್ಲಿ ಕೊಂಡೊಯ್ಯದೆ, ಶಾಂತಿ ಸಮಾಧಾನವನ್ನು ಕೊಂಡೊಯ್ಯಬೇಕು. ಸತ್ಯವು ಖಡ್ಗವಾಗಿ ವಿರೋಧವನ್ನು ಎಬ್ಬಿಸುತ್ತದೆ ನಿಜ. ಹೌದು, ಸತ್ಯವು ಮಾತ್ರ ವಿರೋಧ ಮತ್ತು ಒಡಕು ಹುಟ್ಟಿಸಬೇಕೆ ಹೊರತು, ಕರ್ತನ ಪ್ರತಿನಿಧಿಗಳ ಒರಟುತನ ಅಥವ ನಿಷ್ಕರುಣೆಯಿಂದ ಕೂಡಿದ ಮಾತು ಮತ್ತು ಕೃತ್ಯಗಳಿಂದಲ್ಲ. ಈಗಿನ ಬಿಡುವಿಲ್ಲದ ಚಟುವಟಿಕೆಯಲ್ಲಿ ತೊಡಗಿರುವ ಮಾನವರನ್ನು ಪ್ರಚೋದಿಸಲು ಬಹಳ ವಿಷಯಗಳಿವೆ. ಸತ್ಯವನ್ನು ಅಂಗೀಕರಿಸಿರುವ ಎಲ್ಲರೂ “ಅದರ ಮತ್ತು ಯೇಸು ಕ್ರಿಸ್ತನ ಮೂಲಕ ಸಮಾಧಾನದ ಮಾತನ್ನು ಆಡಬೇಕು; ಭಾವವನ್ನು ಸ್ವೀಕರಿಸಬೇಕು-Z ’04, 108 (ಖ 3346).

* * *

ಆಗಸ್ಟ - 9

ಹಾಗಾದರೆ ನಿನ್ನೊಳಗಿರುವ ಬೆಳಕೇ ಕತ್ತಲಾದರೆ, ಆ ಕತ್ತಲು ಎಷ್ಟೆನ್ನಬೇಕು!

-ಮತ್ತಾಯ 6:23

ಸುಗ್ಗಿ ಎಂದರೆ, ಗೋಧಿಯನ್ನು ಹೊಟ್ಟಿನಿಂದ ತೂರಿ ಬೇರ್ಪಡಿಸುವ ಸಮಯ. ಸೋಸುವ ಮತ್ತು ಬೇರೆ ಮಾಡುವ ಸಮಯ. ಈ ಸಮಯದಲ್ಲೇ ಪ್ರತಿಯೊಬ್ಬ ಸೇವಕನು ತನ್ನ ಗುಣವನ್ನು ವ್ಯಕ್ತಗೊಳಿಸುವನು; ಎಲ್ಲವನ್ನು ಮಾಡಿ ನಿಲ್ಲುವನು. ಈ ಸುಗ್ಗಿಯ ಪರೀಕ್ಷೆ ಯೆಹೂದ್ಯ ಯುಗದ ಅಂತ್ಯದಲ್ಲಾದ ಸುಗ್ಗಿ ಅಥವ ಪರೀಕ್ಷೆಗಳಿಗೆ ಹೋಲಿಕೆಯಾಗಿದೆ. ಅಥವ ಮಾದರಿಯಾಗಿದೆ. ಅದರಲ್ಲಿ ಒಂದು ಶಿಲುಬೆ, ಮತ್ತೊಂದು ಕ್ರಿಸ್ತನ ಪ್ರತ್ಯಕ್ಷತೆ, ಮಗದೊಂದು ಧೀನ ಸ್ವಭಾವ, ಇನ್ನೊಂದು ಪ್ರೀತಿ. ಯೆಹೂದ್ಯ ಯುಗದ ಅಂತ್ಯದಲ್ಲಿ ಕರ್ತನು ಪ್ರತ್ಯಕ್ಷನಾಗಿರುವದನ್ನು ತಿಳಿಯದೆ ಹೋದಕ್ಕಾಗಿ ಅವರನ್ನು ಆಕ್ಷೇಪಿಸಿದನು. ಒಂದು ಸಲ ಸತ್ಯದ ಪರಿಜ್ಞಾನಕ್ಕೆ ಬಂದು ನಂತರ ಕತ್ತಲೆಗೆ ಹೋಗುವವರು ಎರಡರಷ್ಟು ಆಕ್ಷೇಪಣೆಗೆ ಒಳಗಾಗುವರು ಅಂದರೆ, ಅವರು ಅಪನಂಬಿಗಸ್ತರಾಗುವರು-Z ’04, 297 (ಖ 3436).

* * * * * * * * *

ಆಗಸ್ಟ - 10

ಕ್ರಿಸ್ತನಿಂದ ಉತ್ತೇಜನ, ಪ್ರೀತಿಯ ಪ್ರೇರಣೆ, ಪವಿತ್ರಾತ್ಮನ ಅನ್ಯೋನ್ಯತೆ, ಕಾರುಣ್ಯ ದಯಾರಸಗಳು ಉಂಟಾಗುವದಾದರೆ ಐಕಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣ ಮಾಡಿರಿ. ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ; ಅನ್ಯೋನ್ಯ ಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ. -ಫಿಲಿಪ್ಪಿ 2:1,2

ಐಕ್ಯತೆ, ಸಮಾಧಾನ ಮತ್ತು ಸಹೋದರ ಕರುಣೆಯ ಬಗ್ಗೆ ಎಂತಹ ಪ್ರಭೋದನೆ! ಸಭೆಯಲ್ಲಿರುವ ಪ್ರತಿಯೊಬ್ಬನು ಸಮಾಧಾನವಾಗಿಯೂ, ಸಹಿಸಿಕೊಳ್ಳುವವನಾಗಿಯೂ, ದಯಾಪರನಾಗಿಯೂ, ಸಹಾಯ ಮಾಡುವವನಾಗಿಯೂ ಮತ್ತು ಒಬ್ಬರನೊಬ್ಬರು ಸಂತೈಸುವವರಾಗಿಯೂ ಇರುವಂತೆ ಈ ಪ್ರಬೋಧನೆ ನಮಗೆ ಸೂಚನೆಯನ್ನು ಕೊಟ್ಟಿದೆ. ಹೀಗೆ ಕರ್ತನ ಆತ್ಮವು ಎಲ್ಲರಲ್ಲಿಯೂ ಸಮೃದ್ಧವಾಗಿದ್ದು, ನೀತಿ

ಮಾರ್ಗದಲ್ಲಿ ನಮ್ಮನ್ನು ಪ್ರಗತಿಯತ್ತ ಕೊಂಡೊಯ್ಯುತ್ತದೆ. ಪ್ರಿಯ ಸಹೋದರರೆ (ಬಾರ್ನಬಾಸ್ ಅಂದರೆ, ಸಹೋದರರನ್ನ ನೆಮ್ಮದಿಯಾಗಿಡುವುದು) ಹಿತಕರವಾಗಿಯೂ, ಸಮಾಧಾನದಿಂದ ಕೂಡಿದವರಾಗಿಯೂ ಇರುವದು ಎಂತಹ ಯೋಗ್ಯವಾದ ಸ್ಥಿತಿ. ಆದುದರಿಂದ ನಾವು ಪವಿತ್ರಾತ್ಮನನನ್ನು ಸಮೃದ್ಧಿಯಾಗಿ ಪಡೆದು ಕರ್ತನ ಚಿತ್ತವನ್ನು ಆತನ ಇಷ್ಟವನ್ನು ನೆರವೇರಿಸುವ ನಾವು ದೇವರಿಗೆ ಪುತ್ರ ಪುತ್ರಿಯರಾಗಿ ಚಿಯೋನನ್ನು ಸಂತೈಸುವವರಾಗಿ ತಂದೆ ದೇವರ ಪ್ರತಿನಿಧಿಗಳಾಗಿ ಪವಿತ್ರಾತ್ಮ ಮತ್ತು ಸತ್ಯವನ್ನು ವಿತರಣೆ ಮಾಡುವ ಸಾಧನಗಳಾಗೋಣ-Z ’04, 296 (ಖ 3434).

* * *

ಆಗಸ್ಟ - 11

ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವನು. -ಪ್ರಕಟನೆ 2:10

ಇನ್ನು ಸ್ವಲ್ಪ ಸಮಯದಲ್ಲಿ ಪರೀಕ್ಷೆಗಳು ಮುಗಿಯುವವು. ಈ ಸ್ವಲ್ಪ ಸಮಯದಲ್ಲಿ ನಾವು ಪರೀಕ್ಷೆಗಳ ಕಾಲದಲ್ಲಿರುತ್ತೇವೆ. ಈ ಪರೀಕ್ಷೆಯು ನಮ್ಮನ್ನು “ನಾವು ನಿರೀಕ್ಷಿಸುವ ಮಹಿಮೆಯಲ್ಲಿ” ಸೇರಲು ಯೋಗ್ಯರನ್ನಾಗಿಯೋ ಅಥವ ಸೇರದಿರಲು ಅಯೋಗ್ಯರನ್ನಾಗಿಯೋ ಈ ಪರೀಕ್ಷೆಗಳು ರುಜುವಾತುಪಡಿಸುವದು. ಇವುಗಳನ್ನು ನಾವು ಪ್ರಶಂಸಿಸುವುದಾದರೆ, ಕರ್ತನು ನಡೆದಂತೆ ನಾವು ನಡೆಯೋಣ. ಇದು ನಮ್ಮ ಜೀವನದಲ್ಲಿ ಅಥವಾ ಬೇರೆ ಇನ್ನಾವುದರಲ್ಲಿ ಇದೆಯೇ ಎಂಬುದನ್ನು ಗಮನಿಸಿ ಕರ್ತನಿಗೆ ಸಮರ್ಪಿಸೋಣ. ಅದನ್ನು ಕರ್ತನು ಅಂಗೀಕರಿಸುವನು. ಈ ಅಂಗೀಕರಿಸುವಿಕೆ ನಾವು ಮಾಡುವ ಕ್ರಿಯೆಗಳ ಯೋಗ್ಯತೆಯಿಂದಲ್ಲ; ಅಥವ ತ್ಯಾಗದಿಂದಲ್ಲ. ಆದರೆ, ಕ್ರಿಸ್ತನು ನಮಗಾಗಿ ಸಮರ್ಪಿಸುವ ಯಜ್ಞದ ಫಲದಿಂದ ಮಾತ್ರ. ನಮ್ಮ ಪ್ರತಿಷ್ಠಿತ ಜೀವನದಲ್ಲಿ ನಾವು ಕರ್ತನಿಗಾಗಿ ಕಳೆಯುವ ದಿನಗಳು ಮತ್ತು ಗಳಿಗೆಗಳು ಸಮರ್ಪಕವಾಗಿಯೂ ಹಾಗೂ ನಾವು ನಮ್ಮ ಸ್ವಾರ್ಥತೆಗಾಗಿ ಕಳೆದ ಸಮಯ ಮತ್ತು ದಿನಗಳನ್ನು ಸಹ ಗಮನಿಸಬೇಕು ಹಾಗೂ ಈ ವಿಷಯಗಳ ಬಗ್ಗೆ ನಾವು ಕಾಲವನ್ನು ಇತರರ ಬಗ್ಗೆ ನಮ್ಮ ಕರ್ತವ್ಯಕ್ಕನುಸಾರ ಸಕಾರಣವಾಗಿ ದೇವರ ವಾಕ್ಯಕ್ಕನುಸಾರವಾಗಿ ಕಳೆಯುವ ಕಾಲಕ್ಕಿಂತ ಹೆಚ್ಚು ಕಾಲವನ್ನು ವ್ಯರ್ಥವಾಗಿ ಕಳೆದಿದ್ದೇವೆಯೇ ಎಂಬುದನ್ನು ಲೆಕ್ಕಹಾಕಬೇಕು. ಹೀಗಿರುವಲ್ಲಿ ನಾವು ನಮ್ಮ ಹರಕೆಯನ್ನು ಕರ್ತನಿಗಾಗಿ ಎಷ್ಟರಮಟ್ಟಿಗೆ ತೀರಿಸುವೆವು ಎಂಬದನ್ನು ಮುಖ್ಯವಾಗಿ ಗಮನಿಸಬೇಕು-Z ’05, 380 (ಖ 3685).

* * *

ಆಗಸ್ಟ - 12

ತನ್ನ ತಪ್ಪುಗಳನ್ನೆಲ್ಲಾ ತಿಳಿದುಕೊಳ್ಳುವವನು ಯಾವನು? ಮರೆಯಾದವುಗಳಿಂದ ನನ್ನನ್ನು ನಿರ್ಮಲ ಮಾಡು ........... ಅಂಥ ಪಾಪಗಳು ನನ್ನನ್ನು ಆಳದಿರಲಿ. ಯೆಹೋವನೇ ನನ್ನ ಶರಣನೇ, ನನ್ನ ವಿಮೋಚಕನೇ, ನನ್ನ ಮಾತುಗಳು ನನ್ನ ಹೃದಯದ ಧ್ಯಾನವೂ ನಿನಗೆ ಸಮರ್ಪಕವಾಗಿರಲಿ.
-ಕೀರ್ತನೆಗಳು 19:12-14

ಈ ದೈವ ಪ್ರೇರಿತ ಪ್ರಾರ್ಥನೆಯನ್ನು ಪ್ರತಿಯೊಬ್ಬ ಬುದ್ಧಿವಂತ ಕ್ರೈಸ್ತನು ಎಡಬಿಡದೆ ಮಾಡುತ್ತಿರುವನು. ಇದರಿಂದ ಮರೆಯಾದ ತಪ್ಪುಗಳಿಂದ ಶುದ್ಧಿಯಾಗುವನು. ಹಾಗೆಯೇ, ಅಹಂಕಾರ ಪಾಪಗಳನ್ನು ತಡೆಹಿಡಿದು, ಹೃದಯಪೂರ್ವಕವಾಗಿ ಪ್ರಾರ್ಥಿಸಲು ಅನುಕೂಲವಾಗುವದು. ಹಾಗೆಯೇ, ಎಚ್ಚರಿಕೆಯಿಂದಿದ್ದು, ಪ್ರಾರಂಭದಲ್ಲೇ ಈ ಪಾಪಗಳು ತಲೆ ಎತ್ತದಂತೆ ಮಾಡಲು ತನ್ನ ಹೃದಯವನ್ನು ಶುದ್ಧೀಕರಿಸಿಕೊಳ್ಳುವದಕ್ಕೂ ಹಾಗೂ ಶುದ್ಧರಾಗುವದಕ್ಕಾಗಿ ಕೃಪೆಗೆ ಮೂಲ ಕಾರಣನಾದ ದೇವರನ್ನು ಎಡಬಿಡದೆ ಮರೆಹೋಗಿ ತಕ್ಕ ಸಮಯಗಳಲ್ಲಿ ಸಹಾಯ ಪಡೆಯುವನು. ಯಾರು ಶುದ್ಧ ಜೀವನವನ್ನು ಮತ್ತು ಕರ್ತನ ಸಂಸರ್ಗವನ್ನು ಅಪೇಕ್ಷಿಸಿ ಕೇವಲ ತೋರಿಕೆಯ ಅಥವ ಅನುಮಾನಿಕ ಪಾಪವನ್ನ ಮಾತ್ರ ಕಾದುಕೊಂಡು ತನ್ನ ಮನಸ್ಸಿನಲ್ಲೇ ಪ್ರಾರಂಭವಾಗುವ ಗುಪ್ತ ಪಾಪವನ್ನು ಲೆಕ್ಕಿಸದೆ ನಡೆಯುವವನು ಒಳ್ಳೆಯದನ್ನು ಮೂರ್ಖನಂತೆ ಮತ್ತು ಅವಿವೇಕತನದಿಂದ ಬಯಸುವವನಾಗಿರುವನು-Z ’98, 22 (ಖ 2248).

* * *

ಆಗಸ್ಟ - 13

ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆ. -2ಕೊರಿಂಥ 5:20

ಕ್ರೈಸ್ತರಾಗಿ ಈ ಸಂಗತಿಯನ್ನು ನಾವು ಯಾವಾಗಲು ಪ್ರಾಮುಖ್ಯವಾಗಿ ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುವದಾದರೆ, ಎಂತಹ ಮಹತ್ವವನ್ನು ನಮ್ಮ ಗುಣಕ್ಕೆ ಕೂಡಿಸುವುದು, ಎಂತಹ ಪರಿವರ್ತನ ಶಕ್ತಿ ಇದಾಗುತ್ತದೆ! ನಮ್ಮ ನೂತನ ಸೃಷ್ಟಿ ಹೋರಾಡುವಾಗ ನಮ್ಮಲ್ಲಿರುವ ಹಳೆಯ ಶಾರೀರಿಕ ಸ್ವಭಾವವು ಸತ್ತುಹೋಗಿದೆ ಎಂದು ಪರಿಗಣಿಸಿ ಅದರ ಮೇಲೆ ಜಯಸಾಧಿಸಲು ಸಹಾಯಕವಾಗಿರುತ್ತದೆ. ನಮ್ಮ ಪೌರತ್ವವು ಪರಲೋಕದಲ್ಲಿದೆ ಎಂಬದಾಗಿ ಅಪೋಸ್ತಲನು ಹೇಳುತ್ತಾನೆ. ನಾವು ಈಗ ಇಲ್ಲಿ ಜೀವಿಸುತ್ತಿದ್ದರೂ ನಾವು ಈ ಲೋಕದವರಲ್ಲ. ನಾವು ನಮ್ಮ ನಿಷ್ಠೆಯನ್ನು ಪೌರತ್ವವನ್ನು ದೇವ ರಾಜ್ಯಕ್ಕೆ ವರ್ಗಾಯಿಸಿಕೊಂಡಿದ್ದೇವೆ. ಈಗ ನಾವು ದೇವರ ರಾಜ್ಯದ ಭಾವಿ ಪ್ರಜೆಗಳಾಗಿ ಅನ್ಯರು ಪರಕೀಯರಂತಿರುವ ಈ ಲೋಕದ ಜನರ ಮಧ್ಯದಲ್ಲಿ ನಾವು ಜೀವಿಸುತ್ತಿದ್ದರೂ ನಾವು ರಾಯಭಾರಿಗಳಾಗಿ, ಪ್ರತಿನಿಧಿಗಳಾಗಿರುವಲ್ಲಿ ಹೆಮ್ಮೆ ಮತ್ತು ಗೌರವವುಳ್ಳ ಸ್ಥಾನದಲ್ಲಿದ್ದು, ಹೆಚ್ಚಿನ ಜವಾಬ್ದಾರಿಯುತವಾದ ಕಾರ್ಯವನ್ನು ನಿರ್ವಹಿಸಿದಾಗ ಅಪೋಸ್ತಲನು ಹೇಳಿರುವ ನೀವು ಮಾತಿನಲ್ಲಾಗಲಿ, ಕೃತ್ಯದಲ್ಲಾಗಲಿ ಯಾವುದನ್ನು ಮಾಡಿದರೂ, ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಮಾಡಿರಿ ಎಂಬದನ್ನು ನೆನಪಿನಲ್ಲಿಟ್ಟು ಜೀವಿಸತಕ್ಕದ್ದು-Z ’04, 72 (ಖ 3329)

* * *

ಆಗಸ್ಟ - 14

ಗುರುವಿನಂತೆ ಆಗುವದು ಶಿಷ್ಯನಿಗೆ ಸಾಕು, ದಣಿಯಂತೆ ಆಗುವದು ಆಳಿಗೆ ಸಾಕು. ಅವರು ಮನೆಯ ಯಜಮಾನನಿಗೆ ಬೆಲ್ಜೆಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನಂದಾರು?
-ಮತ್ತಾಯ 10:25

ಸತ್ಯವನ್ನು ಎಷ್ಟೋ ಸಂತೋಷವಾಗಿ ನಿರೂಪಿಸಿದರೂ ಸತ್ಯವು ಒಂದು ಹರಿತ ಇಬ್ಬಾಯ ಕತ್ತಿಯಾಗಿ ಎಲ್ಲಾ ದಿಕ್ಕುಗಳಲ್ಲಿ ತೂರಿಹೋಗುವುದು. ನಮ್ಮ ಕರ್ತನು ಮುಂತಿಳಿಸಿದಂತೆ ಆಗಾಗ ತಂದೆ ತಾಯಿಯರನ್ನು ಮಕ್ಕಳಿಗೆ ವಿರುದ್ದವಾಗಿಯೂ, ಮಕ್ಕಳನ್ನು ತಂದೆ, ತಾಯಂದಿರ ವಿರುದ್ದವಾಗಿ ತಿರುಗಿಸುವುದು. ಏಕಂದರೆ, ಕತ್ತಲು ಬೆಳಕನ್ನು ಹಗೆ ಮಾಡಿ ಎಲ್ಲಾ ರೀತಿಯಲ್ಲೂ ವಿರೋಧಿಸುತ್ತದೆ. ಈ ವಿಷಯದಲ್ಲಿ ಕರ್ತನು ಬೋಧಿಸಿರುವಂತೆ ನಾವು ಎಷ್ಟೋ ಬುದ್ದಿವಂತಿಕೆಯಿಂದ ಮತ್ತು ನಾಜೂಕಾಗಿ ಸತ್ಯವನ್ನು ಪ್ರಚಾರ ಮಾಡಿದರೂ ಕೊನೆಗೆ ಜನರು ಅಪಾರ್ಥ ಮಾಡಿಕೊಳ್ಳುವರು. ಸತ್ಯವನ್ನು ಪ್ರಚಾರ ಮಾಡುವವರು ಆದಷ್ಟು ಮಟ್ಟಿಗೆ ಎಚ್ಚರಿಕೆಯಿಂದಿದ್ದು, ಅಪಾರ್ಥ ಮಾಡಿಕೊಳ್ಳದಂತೆ ನೋಡಿಕೊಳ್ಳಬೇಕು. ಅವರು ನಮ್ಮನ್ನು ಅಪಾರ್ಥ ಮಾಡಿಕೊಳ್ಳದೆ, ನಾವು ಅರಾಜಕತೆಯನ್ನಾಗಲಿ ಬೇರೆ ಇನ್ನಾವ ಚಟುವಟಿಕೆಯಲ್ಲಾಗಲಿ ನಿರತರಾಗದವರು ಎಂಬದಾಗಿ ಅರ್ಥಮಾಡಿಕೊಳ್ಳುವಂತೆ ಜಾಣತನದಿಂದ ವರ್ತಿಸಿ, ನಾವು ಸತ್ಯಕಾಗಿಯೂ ನೀತಿಗಾಗಿಯೂ ಮತ್ತು ದೈವ ನಿಯಮ ಅಂದರೆ, ಅತ್ಯುನ್ನತ ಧರ್ಮಶಾಸ್ತ್ರವನ್ನು ಅನುಸರಿಸುವವರಾಗಿದ್ದೇವೆ ಎಂಬುದನ್ನು ತಿಳಿಯುವಂತೆ ಮಾಡತಕ್ಕದ್ದು- Z ’03, 13 (ಖ 3130).

* * *

ಆಗಸ್ಟ್ - 15

ಸಹೋದರರೆ, ಅಕ್ರಮವಾಗಿ ನಡೆಯುವವರಿಗೆ ಬುದ್ದಿ ಹೇಳಿರಿ ....... ಎಲ್ಲರಲ್ಲಿಯೂ ದೀರ್ಘ ಶಾಂತರಾಗಿರಿ. 1ಥೆಸ 5:14

ಕರ್ತನ ಜನರು, ತಮ್ಮನ್ನು ಸಮತೋಲನದಲ್ಲಿ ಇಟ್ಟುಕೊಂಡಿರುವವರು ಬಲಹೀನ ಸಹೋದರರಲ್ಲಿ ಅಲ್ಲದೆ, ಧೈರ್ಯ ಸಾಲದೆ ಇರುವವರಲ್ಲಿಯೂ ಹಾಗೂ ಎಲ್ಲರಲ್ಲಿ ಸಹಾನುಭೂತಿ ವ್ಯಕ್ತಪಡಿಸಿ, ತಾಳ್ಮೆಯಿಂದ ಸಹಿಸಿಕೊಳ್ಳುವುದನ್ನೂ ಅಭ್ಯಾಸ ಮಾಡಿಕೊಳ್ಳಬೇಕು. ನಾವು ಜ್ಞಾನದಲ್ಲಿ ಅಭಿವೃದ್ದಿಯಾದಂತೆ ಈ ತಾಳ್ಮೆ ಗುಣವು ವೃದ್ದಿಯಾಗುವದು. ನಾವು ಎಷ್ಟರಮಟ್ಟಿಗೆ ಪರಲೋಕದ ತಂದೆಯಲ್ಲಿರುವ ಈ ತಾಳ್ಮೆ ಗುಣವನ್ನು ಮೆಚ್ಚುತ್ತೇವೆಯೋ ಅಷ್ಟರಮಟ್ಟಿಗೆ ಈ ತತ್ವವನ್ನು ಇತರರ ಪರವಾಗಿ ಅನ್ವಯಿಸುವೆವು. ಪರಲೋಕದ ತಂದೆಯು ಯಾರನ್ನಾದರೂ ಕೃಪೆಯಿಂದ ಕರೆದಿರುವಲ್ಲಿ ಅವನು ಬಹು ಎಚ್ಚರಿಕೆಯಿಂದಿದ್ದು, ಕರ್ತನ ಜೊತೆಯಲ್ಲಿ ಕರೆಗೆ ತಕ್ಕಂತೆ ಸಹಕರಿಸಿ ಕರ್ತನು ನಡೆದಂತ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುತ್ತಿರುವವರೆಲ್ಲರಿಗೆ ಸಹಾಯಕವಾಗಿದ್ದು, ಸಹಕರಿಸಬೇಕು-Z ’03, 24 (ಖ 3135).

* * *

ಆಗಸ್ಟ್ - 16

ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ. -1ಥೆಸ 5:18

ಕರ್ತನ ಅನ್ಯೋನ್ಯತೆಯಲ್ಲಿದ್ದು, ಆತನ ಚಿತ್ತವನ್ನು ಭಕ್ತಿ ಭಾವದಿಂದ ನೆರವೇರಿಸುವ ಹೃದಯವುಳ್ಳವರು ಪ್ರತಿದಿನ ಮುಂಜಾನೆಯಲ್ಲಿ ದೇವರ ಆಶೀರ್ವಾದವನ್ನು ಯಾಚಿಸುವದಲ್ಲದೆ, ಪ್ರತಿದಿನ ಸಂಜೆಯಲ್ಲಿ ದೇವರಿಗೆ ಕೃತಜ್ಞತಾಸ್ತುತಿ ಸಮರ್ಪಿಸುವನು. ಪ್ರತಿಯೊಬ್ಬನು ತನ್ನ ಇಡೀ ಜೀವಮಾನದ ವಹಿವಾಟಿನಲ್ಲಿ ತಾನು ಕರ್ತನಿಗಾಗಿ ಎಲ್ಲವನ್ನು ಪ್ರತಿಷ್ಠೆಪಡಿಸಿಕೊಂಡಿದ್ದೇನೆ ಎಂಬದನ್ನು ಜ್ಞಾಪಿಸಿಕೊಂಡು ನಂಬಿಕೆಯಿಂದ ತನ್ನ ಎಲ್ಲಾ ಜೀವನದ ಎಲ್ಲಾ ವಿಷಯಗಳ ಬಗ್ಗೆ ಕರ್ತನನ್ನು ಆಶ್ರಯಿಸಿಕೊಂಡು, ಅವರು ಜೀವನದಲ್ಲಿ ನಿರ್ವಹಿಸುವ ಕಾರ್ಯಕ್ಕನುಗುಣವಾಗಿ ದೇವರ ಅನುಗ್ರಹ ಮತ್ತು ಆತನ ಪರಾಮರಿಕೆಯನ್ನು ಮನಗಂಡು ಅದರಂತೆಯೇ ದೇವರಿಗೆ ಕೃತಜ್ಞತಾಸ್ತುತಿ ಅರ್ಪಿಸಬೇಕು. ನಮ್ಮ ವಿಷಯದಲ್ಲಿ ಇದೇ ದೇವರ ಚಿತ್ತವಾಗಿದೆ. ದೇವರ ಚಿತ್ತ ನಮ್ಮದಾಗಿಸಿಕೊಂಡು ದೇವರ ಆಶೀರ್ವಾದವನ್ನು ಪಡೆದು ಸದಾ ಆತನನ್ನು ನಿರೀಕ್ಷಿಸುತ್ತಾ, ಜೀವನ ಸಾಗಿಸುವದು ಸೂಕ್ತ. ಇಂತಹ ಸ್ಥಿತಿಯು ನಾವು ಇಕ್ಕಟ್ಟಾದ ಮಾರ್ಗದಲ್ಲಿ ನಡೆದು ಅಭಿವೃದ್ಧಿ ಹೊಂದಲು ಸಹಾಯಕವಾಗಿರುವುದು. ಇವು ನಮಗೆ ಸಹಕಾರಿಯಾಗಿದ್ದು, ನಮ್ಮ ಕರೆಯುವಿಕೆ ಮತ್ತು ಆರಿಸುವಿಕೆಯು ಕೈಗೂಡುವದು-Z ’03, 25 (ಖ 3135).

* * *

ಆಗಸ್ಟ - 17

ಪವಿತ್ರಾತ್ಮವನ್ನು ನಂದಿಸಬೇಡಿರಿ. -1ಥೆಸಲೋನಿಕ 5:19

ಕರ್ತನ ಜನರಿಗೆ ಮತ್ತು ಆತನ ಸಂಸರ್ಗದಲ್ಲಿದ್ದು, ಆತನ ಕಾರ್ಯದಲ್ಲಿ ತೊಡಗಿರುವ ಎಲ್ಲರಿಗೂ ಕರ್ತನ ಆತ್ಮ ಒಂದು ಪ್ರೀತಿಯ ಪವಿತ್ರವಾದ ಜ್ವಾಲೆ. ಈ ಪ್ರೀತಿಯ ಜ್ವಾಲೆಯ ದೈವ ಸಂದೇಶದಿಂದಾಗಿ ಪ್ರತಿಯೊಬ್ಬ ಭಕ್ತನಲ್ಲಿ ಉತ್ತೇಜನ ಕೊಟ್ಟು ಸಭೆಯು ಸಾಮೂಹಿಕವಾಗಿ ಈ ಪವಿತ್ರಾತ್ಮವನ್ನು ಸ್ವೀಕರಿಸಲು ಅನುವು ಮಾಡಿ ಈ ಆತ್ಮವು ಅವರಿಗೆ ಮಾರ್ಗದರ್ಶನ ನೀಡುವುದು. ಎಷ್ಟರಮಟ್ಟಿಗೆ ಸಭೆಯು ಜ್ಞಾನದಲ್ಲಿಯೂ ಮತ್ತು ಪ್ರೀತಿಯಲ್ಲಿಯೂ ಮತ್ತು ಕರ್ತನ ಅನ್ಯೋನ್ಯತೆಯಲ್ಲಿಯೂ ವೃದ್ಧಿಯಾಗುತ್ತದೋ ಅಷ್ಟರಮಟ್ಟಿಗೆ ಈ “ಪ್ರೀತಿಯ ಪವಿತ್ರ ಜ್ವಾಲೆ” ಸಭೆಯನ್ನು ಲೋಕಕ್ಕೆ ಬೆಳಕಾಗಿ ಮಾಡುವದು. ಅದು ಒಂದು ಬೆಟ್ಟದ ಮೇಲಿನ ಪಟ್ಟಣದಂತಿದ್ದು ಮರೆಯಾಗಲಾರದು-Z ’03, 25 (ಖ 3135).

*** *** ***

ಆಗಸ್ಟ - 18

ಎಲ್ಲವನ್ನೂ ಪರಿಶೀಲಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ.

-1ಥೆಸಲೋನಿಕ 5:21

ಭವಿಷ್ಯ ನುಡಿಯುವದನ್ನಾಗಲಿ ಅಥವ ಸಾರ್ವಜನಿಕವಾಗಿ ಮಾತಾಡುವದನ್ನಾಗಲಿ ಅವುಗಳನ್ನು ಎಷ್ಟೇ ಪರಿಗಣಿಸಿದರೂ ಅಥವ ಆಸಕ್ತಿ ತೋರಿಸಿದರೂ ಕರ್ತನ ಜನರು ಅವುಗಳನ್ನು ಕೇಳುವಾಗ, ಕೇಳಿದ್ದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ವಿಮರ್ಷೆ ಮಾಡಿ ಅಂಗೀಕರಿಸಬೇಕು. ತಾವು ಕೇಳಿದ ಎಲ್ಲವನ್ನು ರುಜುವಾತುಪಡಿಸಬೇಕು ಮತ್ತು ತಮ್ಮ ಮನಸ್ಸಿನಲ್ಲಿ ವಿವೇಚಿಸಿ, ತಾವು ಕೇಳಿದ ಸಂಗತಿಗಳು ತರ್ಕಬದ್ಧವಾಗಿಯೂ, ದೈವೋಕ್ತಿಗಳಿಗನುಸಾರವಾಗಿಯೂ ಇದೆಯೇ ಅಥವಾ ಅವು ಕೇವಲ ಊಹೆಯಿಂದಲೂ ಮತ್ತು ಕುತರ್ಕದಿಂದಲು ಕೂಡಿವೆಯೋ ಎಂಬದನ್ನು ತಿಳಿಯುವುದು ಮುಖ್ಯವಾದ ವಿಷಯವಾಗಿದೆ. ದೈವ ವಾಕ್ಯದ ಪರೀಕ್ಷೆಗೆ ತಾವು ಕೇಳಿದ ಎಲ್ಲಾ ವಿಷಯವನ್ನು ಒಪ್ಪಿಸಿ, ಅವು ಪವಿತ್ರಾತ್ಮನಿಗೆ ಅನುಗುಣವಾಗಿವೆಯೋ ಎಂಬದನ್ನು ಅರಿತು ಈ ಪರೀಕ್ಷೆಯಲ್ಲಿ ಸಮರ್ಥನೆಯಾಗದ ಯಾವದೇ ವಿಷಯಗಳಾಗಲಿ ಅವುಗಳನ್ನು ನಾವು ನಿರಾಕರಿಸಬೇಕು-Z ’03, 26 (ಖ 3135).

* * *

ಆಗಸ್ಟ್ - 19

ಸಕಲ ವಿಧವಾದ ಕೆಟ್ಟತನಕ್ಕೆ ದೂರವಾಗಿರಿ. -1ಥೆಸಲೋನಿಕ 5:22

ಈ ಪ್ರಬೋಧನೆಗಳು ಎಲ್ಲ ತರವಾದ ಕೆಟ್ಟವುಗಳ ವಿರುದ್ಧವಾಗಿದೆ. ಕೆಟ್ಟತನ ಒಳ್ಳೆಯದಂತೆ ಕಾಣುವ ಅಥವ ಕೆಟ್ಟದಾಗಿಯೇ ಇರಬಹುದು, ಯಾವುದಾದರೂ ಇವೆಲ್ಲವನ್ನು ನಿರಾಕರಿಸಬೇಕು. ನಮ್ಮ ದೃಷ್ಟಿಗೆ ಒಳ್ಳೆಯದಾಗಿಯೇ ಕಾಣಬಹುದು. ಆದರು ಅದು ಒಳ್ಳೆಯದಲ್ಲ. ಹೀಗಿರುವಲ್ಲಿ ಅಪೋಸ್ತಲನ ಎಚ್ಚರಿಕೆಯ ಮಾತು ಒಂದು ಗಂಭೀರವಾದ ತತ್ವವಾಗಿದೆ. ಹೀಗಿರುವಲ್ಲಿ ಕೆಟ್ಟದನ್ನು ನಿರಾಕರಿಸುವದಲ್ಲದೆ, ನಮ್ಮ ದೃಷ್ಟಿಯಲ್ಲಿ ಒಳ್ಳೇದಾಗಿ ಕಾಣುವಂತ ವಿಷಯಗಳನ್ನು ದೂರವಾಗಿರಿಸಬೇಕು. ಯಾಕಂದರೆ, ನಮ್ಮ ನೆರೆಹೊರೆಯವರು ಮತ್ತು ಸ್ನೇಹಿತರು ಅವುಗಳನ್ನು ಕೆಟ್ಟದೆಂದು ಪರಿಗಣಿಸಿ ನಮ್ಮನ್ನು ಅಪಾರ್ಥ ಮಾಡಿಕೊಳ್ಳಬಹುದು. ನಮ್ಮ ಸ್ವಸ್ತ ಮನಸ್ಸು ನೋಡಲಿಕ್ಕೆ ಕೆಟ್ಟದಾಗಿ ಕಾಣದೆ ಇರುವ, ಕೆಟ್ಟದಾಗಿ ಕಾಣುವ ಹಾಗೂ ತೋರಿಕೆಗೆ ಒಳ್ಳೆಯದಾಗಿ ಕಾಣುವ ಎಲ್ಲಾ ಕೆಟ್ಟದನ್ನು, ಕೆಟ್ಟತನವನ್ನು ವಿಸರ್ಜಿಸಲು ಆದೇಶಿಸುತ್ತೆ. ಆಗ ನಾವು ಕರ್ತನನ್ನು ಮತ್ತು ಸತ್ಯವನ್ನು ಹೆಚ್ಚಾಗಿ ಅನುಸರಿಸಲು ಸಾಧ್ಯವಾಗುತ್ತೆ-Z ’03, 26 (ಖ 3135).

* * *

ಆಗಸ್ಟ್ - 20

ಆದಕಾರಣ, ನೀವು ಯಾವದನ್ನು ತಿಳಿಯದೆ ಪೂಜಿಸುತ್ತಿರೋ ಅದನ್ನೇ ನಿಮಗೆ ತಿಳಿಯಪಡಿಸುತ್ತೇನೆ. -ಅ.ಕೃ. 17:23

ಇಲ್ಲಿ ಅಪೋಸ್ತಲನು ಅನುಸರಿಸಿದ ಕ್ರಮ ನಾವು ಅನುಸರಿಸಲಿಕ್ಕೆ ಯೋಗ್ಯವಾಗಿದೆ. ಎಲ್ಲಾ ಬುದ್ಧಿ ಜೀವಿಗಳು ಹೊಸತನವನ್ನು ನಂಬುವುದಿಲ್ಲ. ಯಾವುದು ಮೌಲ್ಯವೆನಿಸುತ್ತದೋ ಅದು ಬಹಳ ಕಾಲದಿಂದ ಬಂದಿದೆ ಎಂದು ಹೇಳುತ್ತಾರೆ. ಅಪೋಸ್ತಲನಂತೆ ನಾವು ಸತ್ಯ ಸುವಾರ್ತೆಯನ್ನು ತೋರಿಸಲು ಪ್ರಯತ್ನಿಸುವುದಕ್ಕೆ ಅದು ಹೊಸ ಪಾರಮಾರ್ಥಿಕ ವಾರ್ತೆಯಲ್ಲ. ಅದು ಹಳೆಯ ಸುವಾರ್ತೆ, ಅಬ್ರಹಾಮನಿಗೆ ಮುಂತಿಳಿಸಿದ ಸುವಾರ್ತೆ, ನಮ್ಮ ಕರ್ತನಾದ ಕ್ರಿಸ್ತನು ಮತ್ತು ಅಪೋಸ್ತಲರು ಪ್ರಕಟಿಸಿದ ಸುವಾರ್ತೆ. ನಾವು ಎಷ್ಟರಮಟ್ಟಿಗೆ ಈ ಕಾಲದಲ್ಲಿ ತಪ್ಪು ಬೋಧನೆಗಳಿವೆ ಎಂಬದನ್ನು ತೋರಿಸಿಕೊಡುತ್ತೇವೆಯೋ (ಈ ಬೋಧನೆಗಳು ಕತ್ತಲೆ ಯುಗದಲ್ಲಿ ಪ್ರಾರಂಭವಾಯಿತು.) ಅಷ್ಟೇ ತಪ್ಪು ಬೋಧನೆಗಳನ್ನು ಈ ಹೊಸ ಸರಣಿಯಲ್ಲಿ ತಿಳಿಸುತ್ತಿಲ್ಲ. ಬದಲು ನಾವು ಕತ್ತಲೆ ಯುಗಗಳಿಂದ ಬಂದಂತ ತಪ್ಪು ಬೋಧನೆಗಳನ್ನು ತೆಗೆದುಹಾಕಿ, ಬದಿಗಿಟ್ಟು ನಮ್ಮ ಕರ್ತನು ಮತ್ತು ಅಪೋಸ್ತಲರು ಪ್ರಪ್ರಥಮವಾಗಿ ಬೋಧಿಸಿದಂತ ತತ್ವಗಳು, ಸಿದ್ಧಾಂತಗಳು ಹಾಗೂ ನಿಯಮಾವಳಿಗಳನ್ನು ಬೋಧಿಸುತ್ತೇವೆ-Z ’03, 29 (ಖ 3138).

* * *   * * *   * * *

ಆಗಸ್ಟ್ - 21

ನೀವು ಮೊದಲು ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕಪಡಿರಿ.

-ಮತ್ತಾಯ 6:33

ಆತ್ಮೀಕ ಇಸ್ರಾಯೇಲ್ಯರಾದ ಕರ್ತನ ಜನರು ಈ ಯೋಚನೆಯನ್ನು ಸದಾ ತಮ್ಮ ಮನಸ್ಸನಲ್ಲಿಟ್ಟುಕೊಳ್ಳಬೇಕು. ಆತ್ಮೀಕ ವಿಷಯಗಳಿಗೆ ಯಾವಾಗಲು ಮೊದಲ ಆದ್ಯತೆಯನ್ನು ಕೊಡಬೇಕು. ನಂತರ ತಾತ್ಕಾಲಿಕ, ಲೌಕಿಕ ವಿಷಯಗಳನ್ನು ಭವಿಷ್ಯತ್ತಿನ ಅಂತ್ಯವಿಲ್ಲದ ಸುಸ್ಥಿತಿಯನ್ನು ಗಮನದಲ್ಲಿಟ್ಟು ಅವುಗಳನ್ನು ಹತೋಟಿಯಲ್ಲಿಟ್ಟು ನಡಿಸಬೇಕು. ಅಂದರೆ, ಆತ್ಮೀಕ ಬೆಳವಣಿಗೆ ಅಭಿವೃದ್ಧಿ, ಏಳಿಗೆಯನ್ನು ಗಮನದಲ್ಲಿರಿಸಿ ಮತ್ತು ತಮ್ಮ ಮಕ್ಕಳ ಮೇಲೆ ಒಳ್ಳೆಯ ಪ್ರಭಾವ ಬೀರುವಂತೆ ಆ ಮಕ್ಕಳ ಅಭ್ಯುದಯವನ್ನು ಗಮನದಲ್ಲಿಟ್ಟು ನಡೆಯಬೇಕು. ಅವರು ಈ ವಿಷಯದಲ್ಲಿ ಯಾರ ಸಲಹೆಯನ್ನು ತೆಗೆದುಕೊಳ್ಳಬಾರದು. ಆ ಸಲಹೆ ಅವರ ಕುಟುಂಬವನ್ನು, ಅವರನ್ನು ಅಹಿತಕರ, ದೇವರಿಲ್ಲದ ವಾತಾವರಣವನ್ನು ಸೃಷ್ಟಿಮಾಡುತ್ತದೆ. ಹೀಗಿರುವಲ್ಲಿ ಕರ್ತನ ದಾಸರು ದೃಢವಾದ ಸಂಕಲ್ಪವನ್ನು ಮಾಡಿ ಇಂತಹ ಯಾವ ಸಲಹೆಯನ್ನು ಕೇಳದಂತೆ ತಮ್ಮನ್ನ ಕಾಯ್ದಿರಿಸಿಕೊಳ್ಳಬೇಕು. ಕರ್ತನ ಜನರೇ ತನ್ನ ಜನರು ಎಂಬದಾಗಿ ಅರಿತು ಅದರಿಂದ ಈ ಲೋಕದ ಐಶ್ವರ್ಯ, ಸವಲತ್ತುಗಳು, ಸುಖಭೋಗ ತಮ್ಮ ಜೀವನದಲ್ಲಿ ಕಡಿಮೆಯಾಗಿ ಕಂಡರು ತಾವು ಮಾಡಿದ ಸಂಕಲ್ಪವನ್ನು ಬಿಡಬಾರದು-Z ’02, 350 (ಖ 3110).

* * *

ಆಗಸ್ಟ್ - 22

ನೀವು ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೆ? -ಲೂಕ 2:49

ಕರ್ತನು ಹೇಳಿದ ಈ ಮಾತಿನಂತೆ ನಾವು ಏಕೆ ಕರ್ತನ ಆತ್ಮವನ್ನು ಹೊಂದಿರಬಾರದು? ಹೌದು, ಸತ್ಯ ಸಂತರು ತಮ್ಮದೇ ಆದ ವ್ಯವಹಾರವನ್ನು ಹೊಂದಿರುವದಿಲ್ಲ. ಯಾಕಂದರೆ, ತಮ್ಮ ಎಲ್ಲವನ್ನೂ ತಾವು ಪ್ರತಿಷ್ಠೆಪಡಿಸಿಕೊಂಡಾಗ ಕರ್ತನಿಗೆ ಸಮರ್ಪಿಸಿದರು. ಅವರು ಮನೆವಾರ್ತೆಯವರಂತೆ ಕರ್ತನ ವ್ಯವಹಾರವನ್ನು ಮಾಡುತ್ತಾರೆ. ಅದು ತಾವು ಸತ್ತ ನಂತರ ತಮ್ಮ ಮಕ್ಕಳು ಅಥವ ತಮ್ಮ ಸ್ನೇಹಿತರು ಅಭಿವೃದ್ಧಿಯಾಗುವ ಸ್ಥಿತಿಯನ್ನು ಹೊಂದಲು ಅಲ್ಲ. ಹಾಗೇನಾದರು ಆದರೆ ಅದರಿಂದ ಅವರಿಗೆ ಕೇಡು ಸಂಭವಿಸುವದು. ಅದನ್ನು ಮನೆವಾರ್ತೆಯವನೇ ಯೋಗ್ಯ ರೀತಿಯಲ್ಲಿ ಉಪಯೋಗಿಸುವದನ್ನು ಅರಿತವನಾಗಿ ತಾನು ಮರಣಹೊಂದಿದ ಮೇಲೆ ಈ ಮನೆವಾರ್ತೆಯ ಕಾರ್ಯವನ್ನು ಅಂತ್ಯವಾಗಿ ಅವನು ಲೆಕ್ಕವನ್ನು ಯಜಮಾನನಿಗೆ ಒಪ್ಪಿಸುವನು-Z ’03, 53 (ಖ 3148).

* * *

ಆಗಸ್ಟ್ - 23

ಹೀಗಿರುವದರಿಂದ ನಂಬಿಕೆ ನಿರೀಕ್ಷೆ, ಪ್ರೀತಿ ಈ ಮೂರೇ ನಿಲ್ಲುತ್ತವೆ. ಇವುಗಳಲ್ಲಿ ದೊಡ್ಡದು ಪ್ರೀತಿಯೇ. -1ಕೊರಿಂಥ 13:13

ಪ್ರೀತಿ ಎಂಬದು ಒಂದು ಉತ್ಕøಷ್ಟವಾದ ವಿಷಯ ಮತ್ತು ಪ್ರೀತಿ ಸದಾ ಕಾಲ ಇರುವದು. ನಾವು ಎಲ್ಲವನ್ನು ನೋಡಿ ಸಂಪೂರ್ಣವಾಗಿ ತಿಳಿದುಕೊಂಡ ಮೇಲೆ ನಂಬಿಕೆ ನಿಲ್ಲುವದಿಲ್ಲ. ತಂದೆ ದೇವರು ಮಾಡಿರುವಂತ ಎಲ್ಲಾ ವಾಗ್ದಾನಗಳು, ವಿಷಯಗಳನ್ನು ನಾವು ಸಾಕ್ಷಾತ್ತಾಗಿ ಪಡೆದಿರುವಾಗ ನಿರೀಕ್ಷೆ ನಿಲ್ಲುವುದಿಲ್ಲ. ಪ್ರೀತಿಯು ಬಿದ್ದು ಹೋಗುವದಿಲ್ಲ. ಕೊನೆಗೊಳ್ಳುವದೇ ಇಲ್ಲ. ಯಾಕಂದರೆ, ಪ್ರೀತಿಗೆ ಪ್ರಾರಂಭವಿಲ್ಲ. ಯಾಕಂದರೆ, ಅದು ಯೆಹೋವ ದೇವರ ಗುಣ, ಆತನ ಸ್ವಭಾವ. ಹೇಗೆ ದೇವರು ಸದಾ ಇರುತ್ತಾನೆಯೋ, ಹಾಗೆಯೇ ಪ್ರೀತಿಯು ನಿರಂತರವಾಗಿರುತ್ತದೆ-Z ’03, 58 (ಖ 3156).

* * *

ಆಗಸ್ಟ್ - 24

ನಾವು ಒಂದಾಗಿರುವ ಹಾಗೆ ಇವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು. -ಯೋಹಾನ 17:11

ಕರ್ತನು ಸಭೆಯ ಪರವಾಗಿ ವ್ಯಕ್ತಪಡಿಸಿರುವ ಈ ಸುಂದರ ಭಾವನೆಯನ್ನು ಪರಿಗಣಿಸುವದಾದರೆ, ದೈವ ಕುಟುಂಬವು ಆಶೀರ್ವಾದಪೂರಕವಾದ ಒಂದಾಗಿರುವದರ ಮಹತ್ವದ ಅರಿವು ಎಂದು ನಮ್ಮ ಬುದ್ಧಿಗೆ

ಗೊತ್ತಾಗುವದು.  ಈ ಒಂದಾಗಿರುವದು, ಒಂದು ಉದ್ದೇಶದಲ್ಲಿ, ವಿಶ್ವಾಸದಲ್ಲಿ, ಸಹಾನುಭೂತಿಯಲ್ಲಿ, ಪ್ರೀತಿಯಲ್ಲಿ, ಮಾನಮರ್ಯಾದೆಯಲ್ಲಿ ಹಾಗೂ ಎಲ್ಲವನ್ನು ಒಂದಾಗಿ ಪಡೆದಿರುವದು ಆಗಿದೆ.  ನಮ್ಮ ಕರ್ತನು ದೇವರಲ್ಲಿ ಮೊದಲೇ ಒಂದಾಗಿರುವದನ್ನು ವಿವರಿಸಿದ್ದಾನೆ.  ಆದರೆ, ಕ್ರಿಸ್ತನ ಶಿಷ್ಯರು ಇನ್ನು ಈ ಸ್ಥಿತಿ ತಲುಪಿಲ್ಲ.  ಈ ಒಂದಾಗುವದನ್ನು ತಲುಪುವ ಗುರಿಯನ್ನಿಟ್ಟು ಅದನ್ನು ಪಡೆಯಲು ನಾವು ಆಶಿಸುವರಾಗಿರಬೇಕೆಂದು ನಮಗೆ ಕರ್ತನು ಬೋಧಿಸಿದ್ದಾನೆ-Z ’03, 77 (ಖ 3160).

* * *

ಆಗಸ್ಟ - 25

ಕ್ರಿಸ್ತನು ಪ್ರತ್ಯಕ್ಷನಾದರೆ, ನಾವು ಆತನ ಹಾಗಿರುವೆವೆಂದು ಬಲ್ಲೆವು.  ಯಾಕಂದರೆ, ಆತನಿರುವ ಪ್ರಕಾರವೇ ಆತನನ್ನು ನೋಡುವೆವು.                    -1ಯೋಹಾನ 3:2

ನಾವು ಅತಿ ಶೀಘ್ರದಲ್ಲಿ ಪುನರುತ್ಥಾನದಲ್ಲಿ ಬದಲಾವಣೆಯಾಗುವ ಅನುಭವವನ್ನು ಹೊಂದುವೆವು ಹಾಗೂ ನಮ್ಮ ವಿಮೋಚಕನಂತೆ ಆಗುವೆವು ಎಂಬ ನಿರೀಕ್ಷೆಯಲ್ಲಿರೋಣ.  ಮತ್ತು ಆತನಿರುವ ಹಾಗೆಯೇ ಆತನನ್ನು ನೋಡುವೆವು ಮತ್ತು ಮಹಾ ಮಹಿಮೆಯಲ್ಲಿ ಪಾಲುಗಾರರಾಗುವೆವು.  ಅಥವ ಮಹಿಮೆಯುಳ್ಳ ರಾಜ್ಯದಲ್ಲಿ ದೇವರ ಮಕ್ಕಳಾಗಿ ಪ್ರಕಾಶಿಸುವೆವು ಎಂಬ ಈ ಗಂಭೀರ ವಿಷಯಗಳು ನಮ್ಮನ್ನು ಪ್ರೋತ್ಸಾಹಿಸಿ ನಮ್ಮ ಹೃದಯಗಳನ್ನು ಶಕ್ತಿಯುತ ಮಾಡಿ, ನಮ್ಮ ತುಟಿಗಳನ್ನು ಬಲಪಡಿಸಿ ಕರ್ತವ್ಯನಿರತರಾಗುವಂತೆ ಮಾಡುವದು.  ನಮಗೆ ಸಿಕ್ಕುವ ಪ್ರತಿಯೊಂದು ಅವಕಾಶ ಮತ್ತು ನಮಗಿರುವ ಹಕ್ಕನ್ನು ನಮ್ಮ ನಾಯಕನಾದ ಕರ್ತನ ಪರವಾಗಿಯೂ ಮತ್ತು ನಂಬಿಕೆಯ ಮನೆವಾರ್ತೆಯವರ ಪರವಾಗಿಯೂ ಚಲಾಯಿಸಿ ಸೇವೆಯಲ್ಲಿ ನಿರತರಾಗೋಣ.  ಈ ನಿರೀಕ್ಷೆಯು ಕರ್ತನ ಜನರಿಗೆ ಅನೇಕ ಶತಮಾನಗಳಿಂದ ಅಂಕುರವಾಗಿ ಪರಿಣಮಿಸಿರುವಾಗ, ಈಗ ಕರ್ತನ ಪ್ರತ್ಯಕ್ಷತೆಯಲ್ಲಿ ಜೀವಿಸುತ್ತಿರುವ ನಾವು ಆತನು ಪೂರ್ಣವಾಗಿ ತನ್ನನ್ನು ತಾನು ದೇವರ ರಾಜ್ಯದಲ್ಲಿ ಪ್ರಕಟಗೊಳಿಸುವ ಈ ಸಮಯದಲ್ಲಿ ನಾವು ಎಷ್ಟೋ ಹೆಚ್ಚಾಗಿ ಎದುರು ನೋಡುವವರಾಗಿ ಜೀವಿಸೋಣ-Z ’03, 151 (ಖ 3191).

* * *

ಆಗಸ್ಟ - 26

ಪ್ರೀತಿ, ದಯೆ ತೋರಿಸುವದು.                              -1ಕೊರಿಂಥ 13:4

ತಾವು ಬೀದಿಗಳಲ್ಲೊ ಅಥವ ಬೇರೆ ಸ್ಥಳಗಳಲ್ಲಿಯೋ ತಪ್ಪು ಮಾಡುವವರನ್ನು ಕಂಡರೆ ದೇವ ಜನರು ಅವರನ್ನು ಖಂಡಿಸಬಾರದು.  ಬದಲು ಅವರ ಕೊರತೆಯನ್ನು ಮತ್ತು ತಪ್ಪುಗಳನ್ನು ಪ್ರೀತಿಯಿಂದ

ತೋರಿಸಿಕೊಡಬೇಕು. ಸಭ್ಯತೆ ಕ್ರಿಸ್ತೀಯ ಗುಣವಾಗಿದೆ. ಪ್ರಪಂಚದ ದೃಷ್ಟಿಯಲ್ಲಿ ಅದು ಮೆರಗು ಕೊಡುವದಾಗಿದೆ. ಆದರೆ, ಕ್ರೈಸ್ತನಾದವನಿಗೆ ಅದು ಬರೀ ತೋರಿಕೆಯ ದಯೆಯಲ್ಲ. ಅದು ಹೃದಯಾಂತರಾಳದಿಂದ ವ್ಯಕ್ತವಾಗುವ ಭಾವನೆ, ಪ್ರೀತಿಯಿಂದ ಜನಿಸಿರುವ ಭಾವನೆ. ಪ್ರೀತಿಯು ಸಭ್ಯತೆಗೂ, ತಾಳ್ಮೆಗೂ, ದಯೆಗೂ ಕೊಂಡೊಯ್ಯುವದು. ಅವಿಧೇಯತ್ವ ವಿಷಯದಲ್ಲಿಯೂ ಯಾವ ಕಠಿಣವಾದ ದಯೆ ಇಲ್ಲದ ಮಾತುಗಳನ್ನು ಉಪಯೋಗಿಸಿದಾಗಲೂ ಏನನ್ನೂ ಮಾಡದಿರಲು ಅದೇ ಕರ್ತವ್ಯ ಚಿತ್ತವು ಅಪ್ಪಣೆ ಕೊಡುವುದು, ಕರ್ತವ್ಯ ಅಡ್ಡಿಪಡಿಸುವವರೆಗೂ ನಿರಾಕರಿಸುವದು-Z '03, 153 (ಖ 3194).

* * *   * * *   * * *

ಆಗಸ್ಟ - 27

ಹೀಗಿರಲಾಗಿ ಇಂದಿನಿಂದ ನಾವು ಯಾರನ್ನೂ ಶರೀರಸಂಬಂಧವಾಗಿ ಅರಿತುಕೊಳ್ಳುವದಿಲ್ಲ.
-2ಕೊರಿಂಥ 5:16

ಶಾರೀರಿಕ ಬಲಹೀನತೆ ನಮ್ಮಲ್ಲಿ ಆಗಲಿ ಅಥವ ಕ್ರಿಸ್ತನ ಇತರ ಶಿಷ್ಯರಲ್ಲಾಗಲಿ ಇರುವದರ ಬಗ್ಗೆ ಕಾಳಜಿ ವ್ಯಕ್ತಪಡಿಸಬಾರದು ಎಂಬದು ಅಪೋಸ್ತಲನ ಹೇಳಿಕೆಯಲ್ಲ. ಎಲ್ಲಾ ಶಾರೀರಿಕ ಬಲಹೀನತೆಯ ವಿಷಯದಲ್ಲಿ ನಾವು ಕಠಿಣವಾಗಿ ಹೋರಾಡಬೇಕು. ಅವು ಆಗಾಗ್ಗೆ, ನೂತನ ಹೃದಯ, ಮನಸ್ಸು ಮತ್ತು ಚಿತ್ತದ ಹಿತಾಸಕ್ತಿಗಾಗಿ ನಾವು ಕಠಿಣ ಕ್ರಮ ಕೈಗೊಳ್ಳಬೇಕಾಗುವದು. ಇಲ್ಲಿ ನಾವು ಈ ಕಠಿಣ ಕ್ರಮ ಮತ್ತು ಬಲಹೀನ ಮತ್ರ್ಯ ದೇಹ ವಿಭಿನ್ನವಾಗಿರುವದನ್ನು ಗಮನಿಸಬೇಕು. ಈ ರೀತಿ ನಾವು ಪ್ರೀತಿಯನ್ನು ಸಹಾನುಭೂತಿಯನ್ನು ಸಹೋದರ ಸಹೋದರಿಯರಲ್ಲಿ ವ್ಯಕ್ತಪಡಿಸಬೇಕು. ಆದರೂ ಸಹೋದರ ಸಹೋದರಿಯರ ಮತ್ತು ಸಭೆಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ತಪ್ಪು ಮಾಡಿದಾಗ ಆಕ್ಷೇಪಿಸಿ ಅಥವ ಗದರಿಸಿ ಅವರನ್ನು ತಿದ್ದಿ ಸರಿಪಡಿಸಬೇಕು. ಈ ಎರಡು ತರಗತಿಯವರನ್ನು ನಾವು ಹೇಗೆ ಕಂಡುಹಿಡಿಯಬೇಕು, ಅಂದರೆ, ಪುನರುಜ್ಜೀವಿತವಲ್ಲದವನು ಶಾರೀರಿಕ ಅಭಿಲಾಶೆಯಿಂದ ಕೂಡಿರುವನು. ಪುನರುಜ್ಜೀವಿತವಾಗಿರುವವನು. ಆತ್ಮೀಯ ವಿಷಯಗಳ ಬಗ್ಗೆ ಅಭಿಲಾಶೆಯುಳ್ಳವನಾಗಿರುವನು-Z '03, 170 (ಖ 3200).

* * *

ಆಗಸ್ಟ - 28

ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು. -2ತಿಮೋಥಿ 4:2

ಇತರರ ಸಮಯ ಅನಾನುಕೂಲವಾಗಿಯೂ, ಆಯುಕ್ತವಾಗಿಯೂ ಇರುವಾಗ, ನಾವು ಸಭ್ಯತೆ ಮತ್ತು ವಿವೇಚನೆಯಿಲ್ಲದೆ, ಶುಭ ಸಂದೇಶವನ್ನು ಅವರ ಮೇಲೆ ಹೇರಬೇಕು ಎಂಬುವ ಅರ್ಥವಲ್ಲ; ಬದಲು ನಾವು ಸತ್ಯವನ್ನು ಪ್ರೀತಿಸುವವರಾಗಿ ಅದರ ಸೇವೆಯನ್ನು ಉತ್ಸಾಹದಿಂದ ಮಾಡಲು ಅವಕಾಶಗಳು ದೊರೆತಾಗ

ನಮಗೆ ಆ ಸಮಯ ಸಂದರ್ಭ ಅನಾನುಕೂಲವಾಗಿದ್ದರು, ಸುವಾರ್ತೆಯನ್ನು ಸಾರಬೇಕು. ನಮ್ಮ ಜೀವನದ ಮುಖ್ಯ ಉದ್ದೇಶ ಸುವಾರ್ತೆಯನ್ನು ಸಾರುವದಾಗಿದೆ. ಬೇರೆಲ್ಲ ವಿಷಯಗಳು ನಂತರ ಬರುವದು. ಹೀಗಿರುವಲ್ಲಿ ಯಾವ ಅವಕಾಶವನ್ನೂ ನಾವು ಕಳಕೊಳ್ಳಬಾರದು-Z '03, 189 (ಖ 3210).

* * *

ಆಗಸ್ಟ - 29

ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ. ದುರಭಿಪ್ರಾಯಪಟ್ಟು ಬೇಡಿಕೊಳ್ಳುವುದರಿಂದ ನಿಮಗೆ ದೊರೆಯುವದಿಲ್ಲ. -ಯಾಕೋಬ 4:3

ನಾವು ಸರಿಯಾದ ಪ್ರಾರ್ಥನೆ ಮಾಡುವದನ್ನು ಕಲಿಯೋಣ, ಅದಕ್ಕಾಗಿ ಪ್ರಯಾಸಪಟ್ಟು ಸರಿಯಾಗಿ ನಿರೀಕ್ಷಿಸೋಣ. ಹೀಗೆ ಪ್ರಾರ್ಥಿಸಬೇಕಾದರೆ, ನಾವು ಕೇಳುವದರಲ್ಲಿ ಆಸಕ್ತಿಯುಳ್ಳವರಾಗಿ ಮಾತಾಡುವದರಲ್ಲಿ ಮಿತವಾಗಿರಬೇಕು. ದೇವರ ವಾಕ್ಯವನ್ನು ಕೇಳುವದರಲ್ಲಿ ಆಸಕ್ತಿಯುಳ್ಳವರಾಗಿ ಅದರಲ್ಲಿ ಅಡಕವಾಗಿರುವ ಪಾಠಗಳನ್ನು ಅವು ಈಗಾಗಲೆ ನಮಗೆ ಕೊಡೋಣವಾಗಿವೆ. ಆತನು ನಮಗೆ ಕೊಡುವ ಶಿಕ್ಷಣದ ಕ್ರಮ ಮತ್ತು ಆಶೀರ್ವದಿಸಲು ನಮ್ಮನ್ನು ಪರಾಮರಿಸುವದನ್ನು ನಾವು ಪರಿಗಣಿಸಿ ಪ್ರಾರ್ಥಿಸೋಣ. ನಮಗೆ ಇಷ್ಟವಾದದ್ದನ್ನು ಆರಿಸಿಕೊಳ್ಳುವುದರಲ್ಲಿ ನಿಧಾನದಿಂದಿದ್ದು, ಯಾವಾಗಲೂ ನಾವು ಕ್ರಿಸ್ತೀಯ ಗುಣವನ್ನ ಅಭಿವೃದ್ಧಿಪಡಿಸಿಕೊಳ್ಳಲು ಬೇಡಿಕೊಳ್ಳೋಣ. ಆಗ ನಾವು ನಮ್ಮ ಚಿತ್ತವನ್ನಲ್ಲ, ಪರಲೋಕದಲ್ಲಿರುವ ನಮ್ಮ ದೇವರ ಚಿತ್ತವನ್ನು ನಮ್ಮ ಚಿತ್ತವನ್ನಾಗಿಸಲು ಸಾಧ್ಯವಾಗುತ್ತೆ. ಹಾಗೆಯೇ, ನಮ್ಮ ಬೇಡಿಕೆಯು ಇರುವದು-Z '03, 204 (ಖ 3216).

* * *

ಆಗಸ್ಟ - 30

ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ, ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು.
-ಮತ್ತಾಯ 5:16

ಕರ್ತನಿಂದ ಅಬಿಷೇಕಿಸಲ್ಪಟ್ಟವನಾಗಿರುವಾತನು ನಾಯಕನಾಗಿಯೂ ಎಲ್ಲರ ಮೇಲಿರುವವನೂ, ಹತ್ತು ಸಾವಿರ ಮಂದಿಯೊಳಗೆ ಪ್ರಮುಖನು ಮತ್ತು ಸೌಂದರ್ಯ ಉಳ್ಳವನು ಎಂಬದು ಎಷ್ಟು ಸತ್ಯವೋ ಹಾಗೆಯೇ ಈಗಿನ ಜೀವನದಲ್ಲಿ ಕರ್ತನ ಜೊತೆಯಲ್ಲಿ ನಿಕಟವರ್ತಿಗಳಾಗಿದ್ದ ಕರ್ತನ ದೇಹದ ಸದಸ್ಯರೆಲ್ಲರೂ, ಇಡೀ ಪ್ರಪಂಚಕ್ಕೆ ಕರ್ತನನ್ನು ರಾಜನನ್ನಾಗಿ ಘೋಷಿಸುವ ಮೊದಲು, ಅದರ ವಿಶಾಲವಾದ ಮಹತ್ವವುಳ್ಳ ಗುಣವನ್ನು ಕರ್ತನು ಪರಿಗಣಿಸಿ ಮಾನವ ಜನಾಂಗವನ್ನು ಆಳ್ವಿಕೆ ಮಾಡಲು ಆರಿಸಿಕೊಂಡಿರುವದು ಅಷ್ಟರಮಟ್ಟಿಗೆ ಸತ್ಯವಾಗಿದೆ. ಇವರು ಕರ್ತನ ಜೊತೆಯಲ್ಲಿದ್ದವರು ಎಂಬದನ್ನು ಇವರ ವಿಶಾಲ ಹೃದಯ ಉಚ್ಚಮಟ್ಟದ ನೈತಿಕ ಗುಣ ಹಾಗೂ ಸ್ವಸ್ಥ ಮನಸ್ಸು ಇವರ ಬುದ್ಧಿಗೆ ಗೊತ್ತಾಗಿ ಆಗ ಜನರು ಇವರನ್ನು ಪ್ರಶಂಸಿಸುವರು-Z '03, 206 (ಖ 3218).

* * *                    * * *                    * * *

ಆಗಸ್ಟ್ - 31

ಅರಸೇ, ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ, ಆತನು ಧಗಧಗನೆ ಉರಿಯುವ ಆವಿಗೆಯೊಳಗಿಂದ ನಮ್ಮನ್ನು ಬಿಡಿಸಬಲ್ಲನು; ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸುವನು. ಚಿತ್ತವಿಲ್ಲದಿದ್ದರೂ ರಾಜನೇ, ಇದು ನಿನಗೆ ತಿಳಿದಿರಲಿ, ನಾವು ನಿನ್ನ ದೇವರುಗಳನ್ನು ಸೇವಿಸುವದಿಲ್ಲ, ನೀನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸುವದಿಲ್ಲ ಎಂದು ಉತ್ತರ ಕೊಟ್ಟರು. - ದಾನಿಯೇಲ 3:17,18

ನೆಬೂಕದ್ನೆಚ್ಚರ ರಾಜನಿಗೆ ಇಬ್ರಿಯರು ಕೊಟ್ಟ ಉತ್ತರ “ನಾವು ಸೇವಿಸುವ ದೇವರು” ಎಂಬದು ಗಮನಾರ್ಹವಾದದ್ದು. ಅವರು ದೇವರನ್ನು ಒಪ್ಪಿಕೊಳ್ಳುವದಲ್ಲದೆ, ಆತನನ್ನು ಆರಾಧಿಸುವದಲ್ಲದೆ, ತಮಗೆ ದೊರಕಿದ ಎಲ್ಲಾ ಅವಕಾಶಗಳಲ್ಲಿ ಅತನ ಸೇವೆ ಮಾಡಿದರು. ಹೀಗಿರುವಲ್ಲಿ ಪ್ರಿಯ ಸಹೋದರರೆ, ನಾವು ಕೂಡ ಆ ಮೂರು ಮಂದಿ ಇಬ್ರಿಯರಂತೆ ಅರಿಕೆ ಮಾಡಿ ನಾವು ನಮ್ಮ ದೇವರನ್ನಲ್ಲದೆ, ಬೇರೆ ಯಾರನ್ನೂ, ಯಾವದನ್ನೂ ಸೇವಿಸುವದಿಲ್ಲ, ಆರಾಧಿಸುವುದಿಲ್ಲ. ಯಾವ ಆಶೆ ಆಮಿಷಗಳಿಗೆ ಒಳಗಾಗುವುದಿಲ್ಲ. ಅದು ಒಂದು ಬಹುಮಾನವೇ ಆಗಿರಬಹುದು. ಕೀರ್ತಿ ತರುವಂತ್ತದ್ದಾಗಿರಬಹುದು. ನಮ್ಮ ಸ್ನೇಹಿತರು ಕೊನೆಗೆ ನಮ್ಮ ಸ್ವಾರ್ಥಕ್ಕಾಗಿ, ಇವೆಲ್ಲವನ್ನು ನಿರಾಕರಿಸುತ್ತೇವೆ ಎಂಬದಾಗಿ ನಿರ್ಣಯಿಸೋಣ. ನಮ್ಮ ಕರ್ತನು ಹೇಳಿರುವ “ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. ದೇವರು ಆತ್ಮ ಸ್ವರೂಪನು ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು” ಎಂಬದಾಗಿ ನಮ್ಮ ನಾಯಕನು ಕರ್ತನು ಆಗಿರುವಾತನು ಘೋಷಿಸಿದ್ದಾನೆ-Z ’99, 172 (ಖ 2494).

* * *